'ಏರ್ ಡೆಕ್ಕನ್'ನ ವಿಮಾನ ಸಂಚಾರ ಪ್ರಥಮವಾಗಿ ಬೆಂಗಳೂರು- ಹುಬ್ಬಳ್ಳಿ ನಡುವೆ ಆರಂಭವಾಗಲಿದೆ.

ವಿಮಾನಗಳನ್ನು ಪಡೆಯುವ ವಿಶ್ವಾಸ ಹೊಂದಿದೆ.

ಭಾರತದ ಪತ್ರಕರ್ತರ ಜತೆ ಈಚೆಗೆ ಇಲ್ಲಿ

ಸಂಪೂರ್ಣ ದರಪಟ್ಟಿಯನ್ನು ಇದೇ 18ರಂದು ಪ್ರಕಟಿಸಲಾಗುವುದು ಎಂದು ಗೋಪಿನಾಥ್ ತಿಳಿಸಿದರು.

ಮೇಳ ಉದ್ಘಾಟಿಸಿ ಕನ್ನಡದಲ್ಲಿ ಮಾತನಾಡಿದರು.

8ನೇ ಪುಟ ನೋಡಿ

# ಬಾಲಕನ ತೊರೆದ ಕತ್ತಲೆಯ ಪೊರೆ

ಬೆಂಗಳೂರು, ಆ. 9- ಹನ್ನೆರಡು ತಿಂಗಳ ಹಸುಳೆ ಧ್ರುವಕುಮಾರ್‌ಗೆ ಎರಡು ದಿನದಿಂದ ಬಿಡುವಿಲ್ಲದಷ್ಟು ಕೆಲಸ. ಕಂಡಕಂಡ ವಸ್ತುಗಳೆಲ್ಲ ಬೇಕೆಂದು ರಚ್ಚೆ ಹಿಡಿಯುತ್ತಾನೆ. ಕೈಗೆ ಸಿಕ್ಕಿದ್ದನ್ನೆಲ್ಲ ಮುಟ್ಟಿ ಪರೀಕ್ಷಿಸುತ್ತಾನೆ. ಆತನ ಈ ಸಂಭ್ರಮಕ್ಕೆ ಕಾರಣವಿದೆ- ಹುಟ್ಟು ಕುರುಡನಾಗಿದ್ದ ಈತನಿಗೆ ನಿನ್ನೆ (ಶುಕ್ರವಾರ)ಯಷ್ಟೇ ದೃಷ್ಟಿ ಲಭಿಸಿದೆ.

ನಗರದ ನಾರಾಯಣ ನೇತ್ರಾಲಯ ಎಂಬ ಸೂಪರ್ ಸ್ಪೆಷಾಲಿಟಿ ಕಣ್ಣಿನ ಆಸ್ಪತ್ರೆಯ ವೈದ್ಯ ಡಾ.ಅರುಣ್ ಸಂಪ್ರತಿ ಅವರ ಸತತ ಪರಿಶ್ರಮದಿಂದ ಧ್ರುವಕುಮಾರ್‌ಗೆ ಜಗತ್ತನ್ನು ನೋಡುವ ಭಾಗ್ಯ ಲಭಿಸಿದೆ. ಎರಡೂ ಕಣ್ಣುಗಳಲ್ಲಿ ಪೊರೆ ಬೆಳೆದ ಕಾರಣ ಈತನಿಗೆ ಹುಟ್ಟಿನೊಂದಿಗೇ ಅಂಧತ್ವ ಬಂದಿತ್ತು. ಡಾ.ಸಂಪ್ರತಿ 45 ನಿಮಿಷಗಳ ಕಾಲ ಅತಿ ಸೂಕ್ಷ್ಮ ಕ್ಯಾಟರಾಕ್ಟ್ ಶಸ್ತ್ರಚಿಕಿತ್ಸೆ



ಬೆಂಗಳೂರಿನ ನಾರಾಯಣ ನೇತ್ರಾಲಯದಲ್ಲಿ ಶುಕ್ರವಾರ ನೇತ್ರ ಚಿಕಿತ್ಸೆಗೆ ಒಳಗಾದ ನಂತರ ಅಂಧ ತಾಯಿಯ ಮಡಿಲಲ್ಲಿರುವ 12 ತಿಂಗಳ ಹಸುಳೆ ಧ್ರುವಕುಮಾರ್.

ನಡೆಸಿ ಈ ಕಂದಮ್ಮನ ಕುರುಡುತನ ನಿವಾರಿಸಿದರು. ಎರಡೂ ಕಣ್ಣುಗಳಿಗೆ ಏಕಕಾಲದಲ್ಲಿ ಶಸ್ತ್ರಚಿಕಿತ್ಸೆ ನಡೆಸಲಾಯಿತು.

ಅಂದಹಾಗೆ ಈತನ ಹೆತ್ತವರೂ ಹುಟ್ಟುಗುರುಡರು. ತುಮಕೂರು ಜಿಲ್ಲೆಯ ಪಾವಗಡ ತಾಲ್ಲೂಕಿನ ಆಂಜನೇಯ ರೆಡ್ಡಿ ಮತ್ತು ರೇಣುಕಾ ಎರಡು ವರ್ಷ ಹಿಂದೆ ವಿವಾಹವಾದರು. ಅವರಿಗೆ ಹುಟ್ಟಿದ ಮಗುವೇ ಈ ಧ್ರುವಕುಮಾರ್. ರೆಡ್ಡಿ ಅವರು ಸಂಗೀತ ಸೀನಿಯರ್ ಪರೀಕ್ಷೆ ಉತ್ತೀರ್ಣರಾಗಿದ್ದು, ಸಂಗೀತ ಕಲಿಸುತ್ತಾರೆ. ಹೊಟ್ಟೆಪಾಡಿಗೆ ಉದ್ಯೋಗ ಅರಸಿ ಒಂದು ತಿಂಗಳ ಹಿಂದೆ ನಗರಕ್ಕೆ ಬಂದಿದ್ದಾರೆ.

**ಆಶಾಕಿರಣ :** ವರ್ಷದ ಹಿಂದೆ ಈ ದಂಪತಿ ಮಂಡ್ಯದಲ್ಲಿ ನೆಲೆಸಿದ್ದರು. ಆಗ ಮೈಸೂರಿನ ಪ್ರಸಿದ್ಧ ಕಣ್ಣಿನ ಆಸ್ಪತ್ರೆಗೆ ಮಗುವನ್ನು ಕರೆದೊಯ್ದರು.

7ನೇ ಪುಟ ನೋಡಿ